ದೂರವಾಣಿ: 08282 256166 / 257396
E-mail: regexamku@gmail.com

# ಕುವೆಂಪು ವಿಶ್ವವಿದ್ಯಾಲಯ

ಸಂಖ್ಯೆ:ಕುವಿ/ಪವಿ/ಯು.ಜಿ/ 53226 /2015–16

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ಜ್ಞಾನಸಹ್ಯಾದ್ರಿ, ಶಂಕರಘಟ್ಟ–577451
ದಿನಾಂಕ: 14–09–2015

## ಪ್ರಕಟಣೆ

ವಿಷಯ : ನವೆಂಬರ್/ಡಿಸೆಂಬರ್–2015ರಲ್ಲಿ ನಡೆಯುವ ಬಿ.ಎ / ಬಿ.ಎಸ್ಸಿ / ಬಿ.ಕಾಂ / ಬಿ.ಬಿ.ಎಂ / ಬಿ.ಸಿ.ಎ / ಬಿ.ಎಸ್.ಡಬ್ಲ್ಯೂ ಪರೀಕ್ಷೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

*****

ಬಿ.ಎ / ಬಿ.ಎಸ್ಸಿ / ಬಿ.ಕಾಂ / ಬಿ.ಬಿ.ಎಂ. / ಬಿ.ಸಿ.ಎ / ಬಿ.ಎಸ್.ಡಬ್ಲ್ಯೂ ಪದವಿಗಳ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳು ಈ ಕೆಳಕಂಡ ದಿನಾಂಕಗಳಂದು ಪ್ರಾರಂಭವಾಗುತ್ತವೆ.

| ಪ್ರಾಯೋಗಿಕ/ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕಗಳ ವಿವರ. |
|---|
| 1.ಪ್ರಾಯೋಗಿಕ ಪರೀಕ್ಷೆಗಳು–ರೆಗ್ಯುಲರ್/ರಿಪೀಟರ್ ವಿದ್ಯಾರ್ಥಿಗಳಿಗೆ ದಿನಾಂಕ: 19–10–2015 ರಿಂದ 07–11–2015. |
| 2.ಲಿಖಿತ ಪರೀಕ್ಷೆಗಳು ನವೆಂಬರ್ ಎರಡನೇ ವಾರದಲ್ಲಿ ಪ್ರಾರಂಭವಾಗುವುದು. |

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಅಂಚೆಕಛೇರಿ ಅಥವಾ ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸಿ ನಂತರ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವ (ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

**ಕಡ್ಡಾಯವಾಗಿ ಆನ್‌ಲೈನ್‌ನಲ್ಲಿಯೇ ಅರ್ಜಿ ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 8183098136, 8183098138 ಸಂಪರ್ಕಿಸುವುದು.**

| ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು: | | |
|---|---|---|
| 1 | ದಂಡ ಶುಲ್ಕವಿಲ್ಲದೆ | 14–10–2015 ರವರೆಗೆ |
| 3 | ದಂಡ ಶುಲ್ಕ ರೂ. 100=00ರಂತೆ | 15–10–2015 ರಿಂದ 17–10–2015 ರವರೆಗೆ |
| 4 | ದಂಡ ಶುಲ್ಕ ರೂ. 500=00ರಂತೆ | 18–10–2015 ಮತ್ತು 21–10–2015 ರವರೆಗೆ |

| | B.A/B.Sc/B.Com | | BBM/B.C.A/B.S.W | |
|---|---|---|---|---|
| 1 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ರೂ. 390=00 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ರೂ. 660=00 |
| 2 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ ಪ್ರತ್ಯೇಕವಾಗಿ (ಪ್ರತಿ ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.390=00ಕ್ಕೆ ಒಳಪಟ್ಟು) | ರೂ. 125=00 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ ಪ್ರತ್ಯೇಕವಾಗಿ (ಪ್ರತಿ ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.660=00ಕ್ಕೆ ಒಳಪಟ್ಟು) | ರೂ. 145=00 |
| 3 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ | ರೂ. 80=00 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ | ರೂ. 80=00 |
| 4 | ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | ರೂ. 145=00 | ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | ರೂ. 145=00 |
| 5 | ಕಿರುಪರೀಕ್ಷೆಯ ಪುಸ್ತಕ ಶುಲ್ಕ ಎಲ್ಲಾ ಸ್ನಾತಕ ಪದವಿಗಳಿಗೆ (ಪ್ರತಿ ವಿದ್ಯಾರ್ಥಿಗೆ) | | I & II Sem | ರೂ. 60=00 |
| | | | III & IV Sem | ರೂ. 65=00 |
| | | | V & VI Sem | ರೂ. 70=00 |

ಪು.ತಿ.ನೋ.

Scanned by CamScanner

# ವಿದ್ಯಾರ್ಥಿಗಳಿಗೆ ಸೂಚನೆ:

1. ವಿದ್ಯಾರ್ಥಿಗಳು online ಮುಖಾಂತರ ಅರ್ಜಿ ಸಲ್ಲಿಸಲು student.logisys.net.in/kus ನಲ್ಲಿ login ಆಗಿ ನೊಂದಣಿ ಸಂಖ್ಯೆ, ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ ಇಂಟರ್‌ನೆಟ್ ಬ್ಯಾಂಕಿನಲ್ಲಿ ಅಥವಾ ಯಾವುದೇ ಅಂಚೆ ಕಛೇರಿಯಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ಕಾಲೇಜುಗಳಲ್ಲಿ ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ATM (Debit) Card/Credit Card/Online Banking ಮೂಲಕ SBMನ Pay U ಮೂಲಕ ನೇರವಾಗಿ ಹಣಪಾವತಿಸಬಹುದಾಗಿದೆ, ಅಥವಾ ಆನ್‌ಲೈನ್‌ನಲ್ಲಿ ಚಲನ್ ಮುದ್ರಿಸಿಕೊಂಡು ಅಂಚೆಕಛೇರಿ ಮುಖಾಂತರ ಪಾವತಿಸಿದ ನಂತರ ಸಂಬಂಧಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯಮಾಡಲಾಗುವುದಿಲ್ಲ.

ಅ. ರೂ. 2.5 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಮತ್ತು ಪ್ರವರ್ಗ–1ರ Freshers ವಿದ್ಯಾರ್ಥಿಗಳಿಗೆ ಮಾತ್ರ ನಿಯಮಾನುಸಾರ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ಅಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ರೂ. 145/–ಗಳನ್ನು ಪಾವತಿಸಬೇಕು.

ಆ. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ಮತ್ತು ಪ್ರವರ್ಗ–1ರ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಇ. ವಿನಾಯಿತಿ ಹೊಂದಿರುವ ಎಸ್.ಸಿ/ಎಸ್.ಟಿ ಮತ್ತು ಪ್ರವರ್ಗ–1ರ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಅವರುಗಳಿಗೆ ಮಂಜೂರಾಗುವ ವಿದ್ಯಾರ್ಥಿ ವೇತನದಿಂದ ಕಟಾಯಿಸಿ ಆಯಾ ಕಾಲೇಜುಗಳ ಪ್ರಾಂಶುಪಾಲರು ವಿಶ್ವವಿದ್ಯಾಲಯಕ್ಕೆ ಜಮಾ ಮಾಡಬೇಕು. ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ವೇತನ ಮಂಜೂರಾಗದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಈ. ಒಂದು ಲಕ್ಷಗಳಿಗಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ./201/ಬಿ.ಎಂ.ಎಸ್/2011 ಬೆಂಗಳೂರು ದಿನಾಂಕ: 23–06–2012ರಲ್ಲಿ ತಿಳಿಸಿರುತ್ತಾರೆ.

**ಪರಿಶಿಷ್ಟಜಾತಿ:ಪರಿಶಿಷ್ಟಪಂಗಡ ಹಾಗೂ ಮೇಲ್ಕಂಡ ಮೀಸಲಾತಿಗೆ ಒಳಪಡುವ ವರ್ಗಗಳ ಮರುಯತ್ನದ (Repeaters) ವಿದ್ಯಾರ್ಥಿಗಳಿಗೆ ಹಾಗೂ ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿನಾಯ್ತಿ ಇರುವುದಿಲ್ಲ.**

ಶುಲ್ಕ ವಿನಾಯಿತಿ ಬಯಸುವ ಎಲ್ಲಾ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಕಾಲೇಜಿಗೆ ಒಪ್ಪಿಸಬೇಕು.

3. **ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳೂ ಕೂಡಾ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು.**

**4ನೇ ಸೆಮಿಸ್ಟರ್‌ನ ಬಿ.ಎಸ್ಸಿ/ಬಿ.ಕಾಂ./ಬಿ.ಬಿ.ಎಂ./ಬಿ.ಸಿ.ಎ/ಬಿ.ಎಸ್.ಡಬ್ಲ್ಯೂ Freshers / Repeaters ಮತ್ತು ಬಿ.ಎ. 1ನೇ ಸೆಮಿಸ್ಟರ್ ರಿಪಿಟರ್ಸ್ ವಿದ್ಯಾರ್ಥಿಗಳಿಗೆ ಭಾರತ ಸಂವಿಧಾನ ಮತ್ತು 2ನೇ ಸೆಮಿಸ್ಟರ್ ಬಿ.ಎ. Freshers / Repeaters ಮತ್ತು 3ನೇ ಸೆಮಿಸ್ಟರ್‌ನ ಬಿ.ಎಸ್ಸಿ/ಬಿ.ಕಾಂ./ಬಿ.ಬಿ.ಎಂ./ಬಿ.ಸಿ.ಎ/ಬಿ.ಎಸ್.ಡಬ್ಲ್ಯೂ ವಿದ್ಯಾರ್ಥಿಗಳಿಗೆ ಪರಿಸರ ವಿಜ್ಞಾನ ವಿಷಯವು OMR ಪದ್ಧತಿಯಲ್ಲಿ ನಡೆಯುತ್ತದೆ.**

ಪ.ತಿ.ನೋ.

Scanned by CamScanner

# ಪ್ರಾಚಾರ್ಯರಿಗೆ ಸೂಚನೆಗಳು

1. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿ ಸಲ್ಲಿಸಿದ ಚಲನ್‌ನ್ನು ಪರಿಶೀಲಿಸಿ ಕೊನೆ ದಿನಾಂಕದಿಂದ ಎರಡು ದಿನದೊಳಗಾಗಿ ಪ್ರಾಂಶುಪಾಲರ ಮೇಲುಸಹಿಯೊಂದಿಗೆ ಚಲನ್ ಪ್ರತಿ ಹಾಗೂ ಇತರೆ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ನಂತರ ಕಳುಹಿಸುವ ಅರ್ಜಿಗಳನ್ನು ಮಾನ್ಯಮಾಡುವುದಿಲ್ಲ.

2. ಕುಲಸಚಿವರಿಂದ ಪ್ರವೇಶಾತಿ ಅನುಮೋದನೆಯಾಗದ / ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ. ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ಕಾಲೇಜು ಅಥವಾ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.

3. ನಿಯಮಾನುಸಾರ ಅರ್ಹರಾದ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು.

4. ರೂ. 2.5 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಹಾಗೂ ಪ್ರವರ್ಗ-1ರ Freshers ವಿದ್ಯಾರ್ಥಿಗಳಿಗೆ ಮಾತ್ರ ನಿಯಮಾನುಸಾರ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ಅಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ರೂ. 145/-ಗಳನ್ನು ಪಾವತಿಸಬೇಕು.

5. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ಹಾಗೂ ಪ್ರವರ್ಗ-1ರ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

6. ವಿನಾಯಿತಿ ಹೊಂದಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಅವರುಗಳಿಗೆ ಮಂಜೂರಾಗುವ ವಿದ್ಯಾರ್ಥಿ ವೇತನದಿಂದ ಕಟಾಯಿಸಿ ಆಯಾ ಕಾಲೇಜುಗಳ ಪ್ರಾಂಶುಪಾಲರು ವಿಶ್ವವಿದ್ಯಾಲಯದ F&R ಖಾತೆ ಸಂಖ್ಯೆ- 54023036246 ಜಮಾ ಮಾಡಬೇಕು. ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳಿಂದ ಪೂರ್ಣ ಪರೀಕ್ಷಾ ಶುಲ್ಕ ವಸೂಲು ಮಾಡತಕ್ಕದ್ದು.

7. ಕಡೇ ದಿನಾಂಕದ ನಂತರ ಪರೀಕ್ಷಾಂಗ ವಿಭಾಗದಲ್ಲಿ ಪ್ರತಿ ಕಾಲೇಜಿನ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪರಿಶೀಲಿಸಲಾಗುವುದು. ಶುಲ್ಕಪಾವತಿ ಸಮರ್ಪಕವಾಗಿ ಕಂಡುಬರದೇ ಇರುವ ಪಕ್ಷದಲ್ಲಿ ಆ ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರವನ್ನು ನೀಡಲಾಗುವುದಿಲ್ಲ.

8. **ಪ್ರಾಯೋಗಿಕ ಪರೀಕ್ಷೆಗೆ ಅಗತ್ಯವಾದ ಉತ್ತರ ಪತ್ರಿಕೆ / ಲೇಖನ ಸಾಮಾಗ್ರಿ ಹಾಗೂ ಮುದ್ರಿತ ನಮೂನೆಗಳಿಗೆ ಬೇಡಿಕೆಪಟ್ಟಿಗಳನ್ನು ದಿನಾಂಕ: 10-10-2015ರೊಳಗಾಗಿ ತಲುಪಿಸಲು ಸೂಚಿಸಿದೆ.**

9. **ಥಿಯರಿ ಪರೀಕ್ಷೆ ನಡೆಸಲು ಬೇಕಾದ ಉತ್ತರ ಪತ್ರಿಕೆ ಮುದ್ರಿತ ನಮೂನೆಗಳು ಹಾಗೂ ಲೇಖನ ಸಾಮಾಗ್ರಿಗಳ ಬೇಡಿಕೆ ಪಟ್ಟಿಗಳನ್ನು ದಿನಾಂಕ: 30-10-2015ರೊಳಗಾಗಿ ಶ್ರೀ.ರವಿ.ಕೆ.ಆರ್, ವಿಷಯ ನಿರ್ವಾಹಕರು ಪರೀಕ್ಷಾ ವಿಭಾಗ ಇವರಿಗೆ ತಲುಪಿಸಲು ಸೂಚಿಸಿದೆ. (ಮೊ. 9538020448)**

10. **ಪ್ರಶ್ನೆ ಪತ್ರಿಕೆಗಳ ಬೇಡಿಕೆಯನ್ನು ದಿನಾಂಕ: 10-10-2015ರೊಳಗಾಗಿ ಡಾ.ಕೆ.ಯೋಗೇಂದ್ರ, ಉಪಕುಲಸಚಿವ (ಪರೀಕ್ಷಾಂಗ) ಇವರಿಗೆ ತಲುಪಿಸಲು ಸೂಚಿಸಿದೆ.**

11. ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು, ವಿದ್ಯಾರ್ಥಿಗಳ ಸಹಿ ಪಡೆದು, ಆನ್‌ಲೈನ್ ಮೂಲಕ ನಮೂದಿಸಿ ನಂತರ Freeze ಮಾಡಬೇಕು. ನಂತರದ ಮನವಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

**ಪು.ತಿ.ನೋ**

Scanned by CamScanner

12. ವಿಶ್ವವಿದ್ಯಾಲಯವು ಆಂತರಿಕ ಕಿರುಪರೀಕ್ಷೆಯ ಉತ್ತರ ಪತ್ರಿಕೆ (ಬ್ಲೂ ಬುಕ್)ಗಳನ್ನು ಹಿಂಪಡೆಯುವುದರಿಂದ ಸೈದ್ಧಾಂತಿಕ ಪರೀಕ್ಷೆ ಪ್ರಾರಂಭಕ್ಕೆ ಮುಂಚೆ ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆಗಳಿದ್ದಲ್ಲಿ ಅದನ್ನು ಬಗೆಹರಿಸಿಕೊಳ್ಳಬೇಕು. ತಂದನಂತರ ಬರುವಂತಹ ಆಂತರಿಕ ಅಂಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

13. ಆಂತರಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಮ್ಮ ಕಾಲೇಜಿನಲ್ಲಿಯೇ ಆರು ತಿಂಗಳಕಾಲ ಸಂರಕ್ಷಿಸಿಟ್ಟಿಕೊಂಡು ನಂತರ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು.

14. ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕ ಬಿಟ್ಟುಹೋದಲ್ಲಿ ಯಾವ ಕಾರಣಕ್ಕೂ ಹಾರ್ಡ್‌ಕಾಪಿಯನ್ನು ನಂತರ ಕಾಲೇಜಿನಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.

14/9/11

(ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ)
ರಿಜಿಸ್ಟ್ರಾರ್ (ಮೌಲ್ಯಮಾಪನ)

## ವಿಶೇಷ ಸೂಚನೆ:

1. ಬಿ.ಎ/ಬಿ.ಕಾಂ/ಬಿ.ಎಸ್ಸಿ/ಬಿ.ಸಿ.ಎ/ಬಿ.ಬಿ.ಎಂ/ಬಿ.ಎಸ್.ಡಬ್ಲ್ಯೂ/ಬಿ.ಎಸ್.ಎ ಪದವಿಗಳಿಗೆ 2011ರ ಏಪ್ರಿಲ್/ಮೇ ಶೈಕ್ಷಣಿಕ ವರ್ಷದಲ್ಲಿ ಅಥವಾ ತದನಂತರ ವರ್ಷದಲ್ಲಿಪ್ರವೇಶ ಪಡೆದಂತಹ ವಿದ್ಯಾರ್ಥಿಗಳು ಪರಿಸರ ವಿಜ್ಞಾನ ಹಾಗೂ ಭಾರತ ಸಂವಿಧಾನದ ಪರೀಕ್ಷೆಗಳು OMR ಪದ್ಧತಿಯಲ್ಲಿ ನಡೆಯುತ್ತದೆ. OMR ಪದ್ಧತಿಯಲ್ಲಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು OMR ಶೀಟ್‌ನಲ್ಲಿ ವೈಟ್ ಫ್ಲೂಯಿಡ್, ಬ್ಲೇಡ್‌ನ್ನು ಬಳಸಬಾರದಾಗಿ ಸೂಚಿಸಿದೆ. ಹಾಗೂ ನೋಂದಣಿ ಸಂಖ್ಯೆ, ಪ್ರಶ್ನೆ ಪತ್ರಿಕೆಯ ಸರಣಿ ಮತ್ತು ಯಾವ ವಿಷಯದ OMR ಶೀಟ್‌ನ ಬಗ್ಗೆ ಸ್ಪಷ್ಟವಾಗಿ ನಮೂದಿಸುವಂತೆ ಸೂಚಿಸಲಾಗಿದೆ.

2. 2011ರ ಶೈಕ್ಷಣಿಕ ವರ್ಷಕ್ಕೂ ಮತ್ತು ಅದಕ್ಕಿಂತ ಹಿಂದೆ ಪ್ರವೇಶ ಪಡೆದಂತಹ ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಪರಿಸರ ವಿಜ್ಞಾನ ಹಾಗೂ ಭಾರತ ಸಂವಿಧಾನದ ವಿಷಯವು (NON OMR) ಸೈದ್ಧಾಂತಿಕ (ಥಿಯರಿ) ಪದ್ಧತಿಯಲ್ಲೇ ಪರೀಕ್ಷೆಗಳ ಬರೆಯಬೇಕಾಗಿರುತ್ತದೆ.

ಗೆ,

ಕುವೆಂಪು ವಿಶ್ವವಿದ್ಯಾನಿಲಯದ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿ:**

1. ಆಪ್ತಶಾಖೆ, ಮಾನ್ಯಕುಲಪತಿ, ಕುಲಸಚಿವ(ಆಡಳಿತ), ಕುಲಸಚಿವ (ಪರೀಕ್ಷಾಂಗ) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
2. ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
3. ಸರ್ಕಾರಿ ಲೆಕ್ಕಪರಿಶೋಧಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
4. ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
5. ಅಧೀಕ್ಷಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
6. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ – ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.
7. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
8. ನಿರ್ದೇಶಕರು, UCCF ಕಛೇರಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
9. ಎಲ್ಲಾ ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
10. ಕಛೇರಿ ಪ್ರತಿ.

Scanned by CamScanner